**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 350

ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ.ಎಸ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 19.08.2026

| | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ವೋಚ್ಚ ನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ಸೂಚನೆಗಳ ಹೊರತಾಗಿಯೂ ರಾಜ್ಯದ ಹಲವು ಶಾಲಾ-ಕಾಲೇಜು ವಾಹನಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ವೋಚ್ಚ ನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ಸೂಚನೆಗಳನ್ವಯ, ರಾಜ್ಯದ ಶಾಲಾ-ಕಾಲೇಜು ವಾಹನಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುತ್ತಿರುವ ಬಗ್ಗೆ ಪ್ರವರ್ತನ ಕಾರ್ಯದಲ್ಲಿ ವಿಶೇಷ ತಪಾಸಣೆ ಕೈಗೊಂಡು ಶಾಲಾ-ವಾಹನಗಳನ್ನು ಕ್ರಮ ಬದ್ಧವಾಗಿ ಕಾರ್ಯಾಚರಿಸುವುದನ್ನು ಖಚಿತಪಡಿಸಿ ಕೊಳ್ಳಲಾಗುತ್ತಿದೆ. |
| ಆ) | ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಿಗೆ ನಿಗದಿಪಡಿಸಿರುವ ಸಾರಿಗೆ ನಿಯಮಗಳು (ಸ್ಪೀಡ್ ಗವರ್ನರ್, ಅಗ್ನಿಶಾಮಕ ಉಪಕರಣ, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಚಾಲಕರ 5 ವರ್ಷಗಳ ಅನುಭವ ಹಾಗೂ ಗ್ರಿಲ್/ಕಿಟಕಿ ವ್ಯವಸ್ಥೆ ಇತ್ಯಾದಿ) ಸಮರ್ಪಕವಾಗಿ ಪಾಲನೆಯಾಗುತ್ತಿವೆಯೇ ಎಂಬುದನ್ನು ತಪಾಸಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಮಾನ್ಯ ಸರ್ವೋಚ್ಚ ನ್ಯಾಯಾಲಯವು W.P. (Civil) No.13029/1985 ರಲ್ಲಿ ದಿನಾಂಕ:20-11-1997 ಮತ್ತು 16-12-1997 ರಂದು ನೀಡಿರುವ ನಿರ್ದೇಶನದಂತೆ ಶಾಲಾ-ಕಾಲೇಜು ವಾಹನಗಳಲ್ಲಿ ಸುರಕ್ಷತಾ ಕ್ರಮಗಳನ್ನು (ಸ್ಪೀಡ್ ಗವರ್ನರ್, ಅಗ್ನಿಶಾಮಕ ಉಪಕರಣ, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಗ್ರಿಲ್/ಕಿಟಕಿ ವ್ಯವಸ್ಥೆ ಇತ್ಯಾದಿ) ಕಡ್ಡಾಯವಾಗಿ ಪಾಲಿಸಲು ರಾಜ್ಯದ ಎಲ್ಲಾ ಸಾರಿಗೆ ಕಛೇರಿಗಳಿಗೆ ಶಾಲಾ ವಾಹನಗಳನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ಹಾಗೂ ಅರ್ಹತಾ ಪತ್ರ ನವೀಕರಣಕ್ಕೆ ಬರುವ ಸಮಯದಲ್ಲಿ ಪರಿಶೀಲನೆಗೆ ಒಳಪಡಿಸಿ ಖಚಿತ ಪಡಿಸಿಕೊಂಡು ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.<br>ರಾಜ್ಯಾದ್ಯಂತ ಎಲ್ಲಾ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಶಾಲಾ ವಾಹನಗಳಲ್ಲಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಕುರಿತು ಆಯಾ ಶಾಲಾ ಕಾಲೇಜುಗಳ ಮುಖ್ಯಸ್ಥರೊಂದಿಗೆ ಚರ್ಚಿಸಿ ಸೂಕ್ತ ತಿಳುವಳಿಕೆ ನೀಡುವಂತೆ ಸೂಚಿಸಿದ್ದು ಅದರಂತೆ ಕ್ರಮವಹಿಸಲಾಗುತ್ತಿದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ | ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ |

| | | |
|---|---|---|
| | ರಾಜ್ಯಾದ್ಯಂತ ನಿಯಮ ಉಲ್ಲಂಘಿಸಿ ಸಂಚರಿಸುತ್ತಿರುವ ಶಾಲಾ ವಾಹನಗಳ ವಿರುದ್ಧ ಜಂಟಿ ತಪಾಸಣೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ಎಷ್ಟು ವಾಹನಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಹಾಗೂ ಎಷ್ಟು ವಾಹನಗಳ ರಹದಾರಿ (Permit)/ ನೋಂದಣಿಯನ್ನು ರದ್ದು ಪಡಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ನಿಯಮ ಉಲ್ಲಂಘಿಸಿ ಸಂಚರಿಸುತ್ತಿರುವ ಶಾಲಾ ವಾಹನಗಳ ವಿರುದ್ಧ ಪ್ರವರ್ತನ ಸಮಯದಲ್ಲಿ ಒಟ್ಟು 10237 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಈ) | ಅನಧಿಕೃತವಾಗಿ ಗ್ಯಾಸ್ ಕಿಟ್ (LPG/CNG) ಅಳವಡಿಸಿಕೊಂಡು ಮತ್ತು ನಿಗದಿತ ಆಸನ ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯುವ ಅಪಾಯಕಾರಿ ಶಾಲಾ ವಾಹನಗಳನ್ನು ತಡೆಯಲು ಹಾಗೂ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಲು ಸರ್ಕಾರ ರೂಪಿಸಿರುವ ಕಾರ್ಯ ಯೋಜನೆಗಳೇನು? | ಅನಧಿಕೃತವಾಗಿ ಗ್ಯಾಸ್ ಕಿಟ್ (LPG/CNG) ಅಳವಡಿಸಿಕೊಂಡು ಅಥವಾ ಮೂಲ ವಿನ್ಯಾಸ-ನೋಂದಣಿ ವಿವರಗಳಿಗೆ ವಿರುದ್ಧವಾಗಿ ವಾಹನಗಳಲ್ಲಿ ಬದಲಾವಣೆ ಮಾಡಿಕೊಂಡಿರುವುದು ಮತ್ತು ನಿಗದಿತ ಆಸನ ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯುವ ಶಾಲಾ ವಾಹನಗಳನ್ನು ತಪಾಸಣೆಗೆ ಒಳಪಡಿಸಿ ನ್ಯೂನತೆಗಳು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿದೆ ಹಾಗೂ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ನಿಯಮ 125(H) ರಡಿ ಹಾಗೂ ಕೇಂದ್ರ ಸರ್ಕಾರದ ಅಧಿಸೂಚನೆ ಹಾಗೂ ಮಾರ್ಗಸೂಚಿಗಳನ್ವಯ ಶಾಲಾ-ವಾಹನಗಳಲ್ಲಿ Vehicle Location Tracking Device (VLTD) ಯನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯ ಭಾಗವಾಗಿ ಇಲಾಖೆಯು Command and Control Center ಅನ್ನು ಸಾರಿಗೆ ಆಯುಕ್ತರ ಕಛೇರಿಯಲ್ಲಿ ಸ್ಥಾಪಿಸಲಾಗಿದ್ದು, ಸದರಿ ಕೇಂದ್ರವು 24X7 ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. |

**ಟಿಡಿ 70 ಟಿಡಿಕ್ಯೂ 2026**

**(ಬಿ.ಎಸ್. ಸುರೇಶ್)**

ಸಾರಿಗೆ ಸಚಿವರು.

**ಅನುಬಂಧ**

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನಿಯಮ ಉಲ್ಲಂಘಿಸಿ ಸಂಚರಿಸುತ್ತಿರುವ ಶಾಲಾ-ವಾಹನಗಳ ವಿರುದ್ಧ ದಾಖಲಿಸಿರುವ ಪ್ರಕರಣಗಳ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ದಾಖಲಿಸಿರುವ ಪ್ರಕರಣಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 3244 |
| 2 | ಬೆಂಗಳೂರು (ಗ್ರಾಮಾಂತರ) | 183 |
| 3 | ಮೈಸೂರು | 351 |
| 4 | ಹುಬ್ಬಳ್ಳಿ-ಧಾರವಾಡ | 204 |
| 5 | ಮಂಗಳೂರು | 371 |
| 6 | ಬೆಳಗಾವಿ | 297 |
| 7 | ಕಲಬುರ್ಗಿ | 295 |
| 8 | ಕೋಲಾರ | 674 |
| 0 | ತುಮಕೂರು | 192 |
| 10 | ರಾಮನಗರ | 222 |
| 11 | ಚಿಕ್ಕಬಳ್ಳಾಪುರ | 142 |
| 12 | ಮಂಡ್ಯ | 204 |
| 13 | ಹಾಸನ | 1169 |
| 14 | ಚಾಮರಾಜನಗರ | 18 |
| 15 | ಕೊಡಗು | 90 |
| 16 | ಉತ್ತರ ಕನ್ನಡ | 77 |
| 17 | ಚಿಕ್ಕಮಗಳೂರು | 18 |
| 18 | ಉಡುಪಿ | 73 |
| 19 | ದಾವಣಗೆರೆ | 91 |
| 20 | ಚಿತ್ರದುರ್ಗ | 59 |
| 21 | ಶಿವಮೊಗ್ಗ | 236 |
| 22 | ಹಾವೇರಿ | 93 |
| 23 | ವಿಜಯಪುರ | 404 |
| 24 | ಬಾಗಲಕೋಟೆ | 381 |
| 25 | ಗದಗ | 160 |
| 26 | ಬೀದರ್ | 395 |
| 27 | ಯಾದಗೀರ್ | 90 |
| | | |

| | | |
|---|---|---|
| 28 | ರಾಯಚೂರು | 89 |
| 29 | ಕೊಪ್ಪಳ | 149 |
| 30 | ಬಳ್ಳಾರಿ | 108 |
| 31 | ವಿಜಯನಗರ | 158 |
| | ಒಟ್ಟು | **10237** |